C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 362/2018

**ಚಾ.ಸಾ.–12 ಪ್ರಾ.ಸಾ.–06**

| | |
|---|---|
| **ಸಾಕ್ಷಿದಾರರ ಹೆಸರು** | **ಪ್ರಭಾಕರ್ ಜೆ.ಪಿ** |
| **ತಂದೆಯ ಹೆಸರು** | **ಲೇಟ್ ಬಸವಶೆಟ್ಟಿ** |
| **ವಯಸ್ಸು** | **43 ವರ್ಷಗಳು** |
| **ಉದ್ಯೋಗ** | **ಪಿಡಿಒ, ಕೆ. ಬೆಳ್ಳೂರು ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು** |
| **ವಾಸ** | **ಮದ್ದೂರು** |

**ದಿನಾಂಕಃ 10.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ದಿಃ20.01.2018 ರಿಂದ ದಿಃ05.12.2023 ರವರಗೆ ನಾನು ಪಿಡಿಒ ಆಗಿ ವಳಗೆರೆಹಳ್ಳಿ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ಈ ಪ್ರಕರಣದ ತನಿಖಾಧಿಕಾರಿಗಳು ಹಿಂದಿನ ಪಿಡಿಒ ಆಗಿದ್ದ ರೂಪೇಶ್ ಕುಮಾರ್ ಹಾಗೂ 5 ರಿಂದ 8ನೇ ಆರೋಪಿತರು ದಿಃ31.08.2017 ರಂದು ಕರ್ತವ್ಯಕ್ಕೆ ಹಾಜರಾಗಿದ್ದ ಬಗ್ಗೆ ಹಾಜರಾತಿ ಪುಸ್ತಕದ ಉದ್ರಿತ ಭಾಗವನ್ನು ಹಾಗೂ ವಳಗೆರೆಹಳ್ಳಿ ಗ್ರಾಮದಲ್ಲಿ ಚೌರದ ಅಂಗಡಿಗಳಲ್ಲಿ ಅಸ್ಪುಶ್ರತೆ ಆಚರಣೆ ಆಗುತ್ತಿರುವ ಬಗ್ಗೆ ಬಂದಿರುವ ದೂರು ಹಾಗೂ ಅದಕ್ಕೆ ಸಂಬಂದಪಟ್ಟಂತೆ ಪಂಚಾಯಿತಿಯಲ್ಲಿ ನಡೆದಿರುವ ನಡೆವಳಿಗಳ ದಾಖಲೆಗಳನ್ನು ದೃಡೀಕರಿಸಿ ನೀಡುವಂತೆ ಕೋರಿದ್ದು ಅದರಂತೆ ಸದರಿ ದಾಖಲೆಗಳನ್ನು ನಾನು ತನಿಖಾಧಿಕಾರಿಗಳಿಗೆ ದೃಡೀಕರಿಸಿ ನೀಡಿರುತ್ತೇನೆ. 2017 ಆಗಸ್ಟ್ ತಿಂಗಳ

ಹಾಜರಾತಿ ಪುಸ್ತಕದ ಉದ್ರಿತ ಭಾಗದ ದೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–9** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–9(ಎ)** ಎಂದು ಗುರುತಿಸಲಾಗಿದೆ.

3. ದಿಃ06.07.2017 ರಂದು ಚಾಸಾ- 1 ಮತ್ತು ಇತರರು ಗ್ರಾಮ ಪಂಚಾಯಿತಿಯಲ್ಲಿ ನೀಡಿದ ದೂರಿನ ದೃಡೀಕೃತ ಪ್ರತಿಯನ್ನು ನೀಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–**10** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿಪಿ–**10**(ಎ) ಎಂದು ಗುರುತಿಸಲಾಗಿದೆ. ಅದೇ ದಿನ ವಳಗೆರೆ ಗ್ರಾಮ ಪಂಚಾಯಿತಿಯಿಂದ ವೆಂಕಟೇಶರವರಿಗೆ ನೀಡಿರುವ ನೋಟೀಸಿನ ದೃಡೀಕೃತ ಪ್ರತಿಯನ್ನು ನೀಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–**11** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿಪಿ–**11**(ಎ) ಎಂದು ಗುರುತಿಸಲಾಗಿದೆ. ಅದೇ ದಿನ ವಳಗೆರೆ ಗ್ರಾಮ ಪಂಚಾಯಿತಿಯಿಂದ ಶ್ರೀನಿವಾಸ ಬಿನ್ ಲೇಟ್ ಸಿದ್ದಯ್ಯ, ಶ್ರೀನಿವಾಸ ಬಿನ್ ಗೋವಿಂದಯ್ಯರವರಿಗೆ ನೀಡಿರುವ ನೋಟೀಸುಗಳ ದೃಡೀಕೃತ ಪ್ರತಿಗಳನ್ನು ನೀಡಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–**12, 13** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಗಳನ್ನು ನಿಪಿ–**12**(ಎ), **13**(ಎ) ಎಂದು ಗುರುತಿಸಲಾಗಿದೆ.

4. ಸದರಿ ವೆಂಕಟೇಶ, ಶ್ರೀನಿವಾಸ ಮತ್ತು ಶ್ರೀನಿವಾಸ ರವರು ಪಂಚಾಯಿತಿಗೆ ದಿ**22.07.2017** ರಂದು ಕ್ಷೌರ ಮಾಡಲು ಸ್ಥಳಾವಕಾಶ ಕೊಡಿಸುವ ಬಗ್ಗೆ ನೀಡಿರುವ ಅರ್ಜಿಯ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–**14** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿಪಿ–**14**(ಎ) ಎಂದು ಗುರುತಿಸಲಾಗಿದೆ.

5. ದಿಃ23.08.2017 ಮತ್ತು ದಿಃ29.08.2017 ರಂದು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗಳ ನಡೆವಳಿಗಳ ದೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅವುಗಳನ್ನು **ನಿಪಿ–15, 16** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–15(ಎ), 16(ಎ)** ಎಂದು ಗುರುತಿಸಲಾಗಿದೆ. ದಿಃ31.8.2017 ರಂದು ನಡೆದ ಶಾಂತಿ ಸಬೆಯ ನಡೆವಳಿಗಳ ದೃಡೀಕೃತ ಪ್ರತಿಗಳನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–17** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ

ಅವರ ಸಹಿಯನ್ನು **ನಿಪಿ–17(ಎ)** ಎಂದು ಗುರುತಿಸಲಾಗಿದೆ. ಸದರಿ ಶಾಂತಿ ಸಭೆಯ ಆದೇಶವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–18** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–18(ಎ)** ಎಂದು ಗುರುತಿಸಲಾಗಿದೆ.

6. ದಿಃ31.08.2017 ರಂದು ವಳಗೆರೆ ಹಳ್ಳಿ ಗ್ರಾಮ ಪಂಚಾಯಿತಿಯವರು ಚಾಸಾ- 3 ರವರಿಗೆ ನೀಡಿರುವ ನೋಟೀಸಿನ ದೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–**19** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿಪಿ–**19**(ಎ) ಎಂದು ಗುರುತಿಸಲಾಗಿದೆ.

7. ದಿಃ20.10.1982 ರ ಮದ್ದೂರು ಕ್ಷೇತ್ರಾಬಿವೃದಿ ಅಧಿಕಾರಿಯವರ ಕಛೇರಿ ಮದ್ದೂರು ರವರು ಶಂಕರ ಮೈನರ್ ಗಾರ್ಡಿಯನ್ ಗುರುನಾಥಯ್ಯ ಎನ್ನುವವರಿಗೆ ನೀಡಿದ ನಿವೇಶನದ ಹಕ್ಕು ಪತ್ರದ ಕೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–20** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–20(ಎ)** ಎಂದು ಗುರುತಿಸಲಾಗಿದೆ. ದಿಃ02.02.2017 ರಂದು ಪ್ರವೀಣ್ ಕುಮರ್ ರವರು ಅವರು ಅಕ್ರಮವಾಗಿ ನಿರ್ಮಿಸಿರುವ ಮನೆಯನ್ನು ಸಕ್ರಮಗೊಳಿಸಲು ವಳಗೆರೆಹಳ್ಳಿ ಗ್ರಾಮ ಪಂಚಾಯಿತಿಗೆ ನೀಡಿದ ಅರ್ಜಿಯ ದೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–21** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–21(ಎ)** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ರವರಿಂದ:**

8. ನಾನು ವಳಗೆರೆಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಸುಮಾರು **5** ವರ್ಷ ಪಿಡಿಒ ಆಗಿ ಕೆಲಸ ಮಾಡಿರುತ್ತೇನೆ. ನಮ್ಮ ಗ್ರಾಮ ಪಂಚಾಯಿತಿಯಲ್ಲಿ ವಿವಾದಿತ ನಿವೇಶನ ನಂ.**1025** ಕ್ಕೆ ಸಂಬಂದಪಟ್ಟಂತೆ ಚಾಸಾ- **1** ರವರ ಹೆಸರಿನಲ್ಲಿ ಅಥವಾ ಅವರಕುಟುಂಬದ ಸದಸ್ಯರ ಹೆಸರಿನಲ್ಲಿ ಇರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಗ್ರಾಮ ಪಂಚಾಯಿತಿಯ ದಾಖಲೆಗಳ ಅನ್ವಯ ಸದರಿ ನಿವೇಶನ ವಳಗೆರೆಹಳ್ಳಿ ಗ್ರಾಮ ಪಂಚಾಯಿತಿಯ ಮಾಲೀಕತ್ವದಲ್ಲಿ ಇದೆ ಎಂದು ಕಂಡುಬರುತ್ತದೆ. ಸದರಿ ನಿವೇಶನ ಚಾಸಾ- **1** ಮತ್ತು ಅವರ ಕುಟುಂಬದವರುು ಅತೀಕ್ರಮ ಪ್ರವೇಶ ಮಾಡಿ ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಪಂಚಾಯಿತಿಯ ಗಮನಕ್ಕೆ ಬಂದಿರುತ್ತದೆ. ಈ ರೀತಿ

ಗಮನಕ್ಕೆ ಬಂದ ನಂತರ ಸದರಿ ಚಾಸಾ- **1** ಮತ್ತು ಅವರ ಕುಟುಂಬದವರ ಮೇಲೆಸದರಿ ಸ್ವತ್ತನ್ನು ತೆರವುಗೊಳಿಸಲು ಹಲವಾರು ನೋಟೀಸುಗಳು ಮತ್ತು ಕಾರ್ಯಾಚರಣೆಗಳನ್ನು ಪಂಚಾಯಿತಿ ವತಿಯಿಂದ ಮಾಡಿರುತ್ತದೆ. ಆದರೂ ಸಹಾ ಸದರಿ ಸ್ವತ್ತನ್ನು ಪಂಚಾಯಿತಿಯ ವಶಕ್ಕೆ ಬಿಟ್ಟುಕೊಡಲು ಚಾಸಾ- **1** ಮತ್ತು ಅವರ ಕುಟುಂಬದವರು ವಿರೋದ ವ್ಯಕ್ತಪಡಿಸುತ್ತಿದ್ದರು ಎಂದರೆ ಸರಿ.

**9.** ನಾನು 5 ವರ್ಷ ಸದರಿ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಲಿತರಿಗೆ ಕ್ಷೌರ ಮಾಡುವುದು ನಿರಾಕರಿಸುವುದಾಗಲೀ ಅಸ್ಪುಶ್ರತೆ ಆಚರಣೆ ಮಾಡುವುದಾಗಲೀ ಕರೆದುಕೊಂಡು ಬಂದಿರುವುದಿಲ್ಲ. ಸದರಿ ನಿವೇಶನ ಸಂಖ್ಯೆ:1025 ನ್ನು ಪಂಚಾಯಿತಿಯ ವತಿಯಿಂದ ಗ್ರಾಮದ ಭಜಂತ್ರಿಗಳಿಗೆ ನಿವೇಶವನ್ನು ಹಂಚಿಕೆ ಮಾಡಲು ನಿರ್ಧಾರ ಆಗಿರುತ್ತದೆ ಎಂದರೆ ಸರಿ. ಆದರೆ ಚಾಸಾ- 1 ಮತ್ತು ಅವರ ಕುಟುಂಬದವರು ಸದರಿ ನಿರ್ಧಾರಕ್ಕೆ ಮನ್ನಣೆ ನೀಡಿರಲಿಲ್ಲ. ನಿಪಿ–15, 16, 17 ಸಭಾ ನಡವಳಿಗಳು ಮತ್ತು ಶಾಂತಿ ಸಭೆಯ ನಡವಳಿಗಳ ಅನ್ವಯ ಗ್ರಾಮದಲ್ಲಿ ಯಾವುದೇ ರೀತಿಯ ಅಸ್ಪುಶ್ರತೆ ಆಚರಣೆ ನಡೆಯುತ್ತಿಲ್ಲ ಎಂದು ಮನವರಿಕೆ ಆಗುತ್ತದೆ.

**10.** ನನಗೆ ಈಗ ತೋರಿಸಿದ ದಾಖಲೆ ಮದ್ದೂರು ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳು ವಳಗೆರೆಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ರವರಿಗೆ ನೀಡಿದ ಆದೇಶದ ದೃಡೀಕೃತ ಪ್ರತಿ ಆಗಿರುತ್ತದೆ. ಸದರಿ ದಾಖಲೆಯನ್ನು **ನಿಡಿ–1** ಎಂದು ಗುರುತಿಸಲಾಗಿದೆ, ಸದರಿ ದಾಖಲೆಯನ್ನು ಯಥಾ ನಕಲಾಗಿ ಗುರುತಿಸಿರುವ ಸಾಕ್ಷಿಯ ಸಹಿಯನ್ನು **ನಿಡಿ–1(ಎ)** ಎಂದು ಗುರುತಿಸಲಾಗಿದೆ. ನಿಡಿ–1 ರ ಅನ್ವಯ ಚಾಸಾ- 1 ರವರಿಗೆ ಮತ್ತು ಅವರ ಕುಟುಂಬದವರಿಗೆ ವಳಗೆರೆಹಳ್ಳಿ ಗ್ರಾಮದಲ್ಲಿ ಈಗಾಗಲೇ ಎರಡು ವಾಸದ ಮನೆಗಳು ಹಾಗೂ ಒಂದು ಎಕರೆಗೆ ಮೇಲ್ಪಟ್ಟು ಕಂದಾಯದ ಜಮೀನು ಹೊಂದಿರುವುದರಿಂದ ಅವರ ಆರೋಪವನ್ನು ವಜಾಗೊಳಿಸಿ ಸ್ವತ್ತು ಸಂಖ್ಯೆ:1044/1025 ಆಸ್ತಿಯನ್ನು ಪಂಚಯಿತಿ ಸುಪರ್ದಿನಲ್ಲಿಯೇ ಮುಂದುವರೆಸಬೇಕೆಂದು ಹಾಗೂ ಗ್ರಾಮದ ಇತರೆ ಅರ್ಹ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಮಂಜೂರು ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಲಾಗಿದೆ. ಈಗಲೂ ಸಹಾ ಸದರಿ ಸ್ವತ್ತು ಪಂಚಾಯಿತಿ ಸುಪರ್ದಿನಲ್ಲಿಯೇ ಇರುತ್ತದೆ.

**ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

11. ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**